ಕರ್ನಾಟಕ ವಿಧಾನ ಪರಿಷತ್
140ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 627

ಸದಸ್ಯರ ಹೆಸರು : ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 11-03-2020

ಉತ್ತರಿಸುವ ಸಚಿವರು : ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಹಳಿಯಾಳದಿಂದ ತಾಟವಾಳ ತನಕ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಹಾಳಾಗಿದ್ದು, ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಳಿಯಾಳ ತಾಲೂಕಿನ ಹಳಿಯಾಳ ಲೋಕೋಪಯೋಗಿ ಉಪ-ವಿಭಾಗ ವ್ಯಾಪ್ತಿಯಲ್ಲಿ ಬರುವ ಹಳಿಯಾಳದಿಂದ ತಾಟವಾಳ ಗಡಿಯವರೆಗಿನ ರಸ್ತೆಯು ಪ್ರಸಕ್ತ ಸಾಲಿನಲ್ಲಿ ಉಂಟಾದ ಅತೀವೃಷ್ಠಿಯಿಂದ ಹಾಳಾಗಿದ್ದು, ಸದರಿ ರಸ್ತೆಯಲ್ಲಿ ಉಂಟಾಗಿದ್ದ ಗುಂಡಿಗಳನ್ನು ಡಾಂಬರು ಮಿಶ್ರಿತ ಜೆಲ್ಲಿಯಿಂದ ದುರಸ್ಥಿ ಪಡಿಸಿ ಸಾರ್ವಜನಿಕ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.
ಆ)	ಸದರಿ ಹಾಳಾಗಿರುವ ರಸ್ತೆ ರಿಪೇರಿ ಕಾರ್ಯಕ್ಕೆ ಎಷ್ಟು ಅನುದಾನ ಮಂಜೂರಾಗಿರುತ್ತದೆ; (ಸವಿಸ್ತಾರ ವರದಿ ನೀಡುವುದು)	ಸದರಿ ರಸ್ತೆಯ ದುರಸ್ತಿ ಕಾಮಗಾರಿಗೆ 2019-20ನೇ ಸಾಲಿನಲ್ಲಿ ಒದಗಿಸಿದ ಅನುದಾನದ ವಿವರ ಕೆಳಕಂಡಂತಿದೆ. 1) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ರ ಕಿ.ಮೀ 39.67 ದಿಂದ 46.00, ಕಿಮೀ. 49.35 ರಿಂದ 52.00 ಹಾಗೂ ಕಿಮೀ. 55.00 ರಿಂದ 81.85 ರ ವರೆಗೆ ರಸ್ತೆಯ ಮುಂಗಾರು ಪೂರ್ವ ಹಾಗೂ ಮುಂಗಾರು ನಂತರದ ನಿರ್ವಹಣೆಗೆ ರೂ.46.40 ಲಕ್ಷ ಅನುದಾನ ಮಂಜೂರಾಗಿದೆ. (ಹಳಿಯಾಳದಿಂದ ತಾಟವಾಳ ಗಡಿಯವರೆಗೆ ಕಿ.ಮೀ 50.00 ರಿಂದ 81.85 ರ ವರೆಗೆ ಬರುತ್ತದೆ.) 2) ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 46.00 ದಿಂದ 49.50, ಕಿ.ಮೀ 52.00 ದಿಂದ 55.00 ಹಾಗೂ ಕಿಮೀ. 59.50 ದಿಂದ 60.50 ರ ವರೆಗೆ ಸುಧಾರಣೆ ಮಾಡುವ ಕಾಮಗಾರಿಗೆ ರೂ.500.00 ಲಕ್ಷ ಅನುದಾನ ಮಂಜೂರಾಗಿರುತ್ತದೆ. 3) ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 55.00 ರಲ್ಲಿ ಸರ್ಕಲ್ (ಕೆಸರೊಳ್ಳಿ) ಸುಧಾರಣೆ ರೂ.5.00 ಲಕ್ಷ ಅನುದಾನ ಮಂಜೂರಾಗಿರುತ್ತದೆ.
ಇ)	ಸದರಿ ರಸ್ತೆ ಕಾಮಗಾರಿ ಕುರಿತು ಟೆಂಡರ್ ಕರೆಯಲಾಗಿದೆಯೇ; (ವಿವರ ನೀಡುವುದು)	ಮೇಲ್ಕಾಣಿಸಿದ ಎಲ್ಲ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆ ನಿಗದಿಪಡಿಸಲಾಗಿದೆ.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಈ)	ಸದರಿ ರಸ್ತೆ ಕಾಮಗಾರಿ ಟೆಂಡರ್‌ನ್ನು ಯಾವ ಗುತ್ತಿಗೆದಾರ ಪಡೆದುಕೊಂಡಿರುತ್ತಾರೆ; ಹಾಗೂ ಸದರಿಯವರು ರಸ್ತೆ ಕಾಮಗಾರಿ ಎಂದಿನಿಂದ ಪ್ರಾರಂಭ ಮಾಡುತ್ತಾರೆ; ಪ್ರಾರಂಭ ಮಾಡಿದ್ದಲ್ಲಿ, ಯಾವಾಗ ಕಾಮಗಾರಿ ಮುಗಿಯುತ್ತದೆ; ಸದರಿ ಗುತ್ತಿಗೆದಾರರಿಗೆ ಅನುದಾನ ಬಟವಾಡೆ ಮಾಡಿರುತ್ತಾರೆಯೇ? (ಸವಿಸ್ತಾರ ವರದಿ ನೀಡುವುದು)	1) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 39.67 ದಿಂದ 46.00, ಕಿಮೀ. 49.35 ರಿಂದ 52.00 ಹಾಗೂ ಕಿಮೀ 55.00 ರಿಂದ 81.85 ರ ವರೆಗೆ ರಸ್ತೆಯ ಮುಂಗಾರು ಪೂರ್ವ ಹಾಗೂ ಮುಂಗಾರು ನಂತರದ ನಿರ್ವಹಣೆಗೆ ರೂ. 46.40 ಲಕ್ಷ. ಮಂಜೂರಾಗಿದ್ದು, ಶ್ರೀ ಬಿ.ಎನ್. ಕಾಮ್ರೇಕರ ಗುತ್ತಿಗೆದಾರರು, ಹಳಿಯಾಳ ಇವರಿಗೆ ರೂ.34.24 ಲಕ್ಷ ಮೊತ್ತಕ್ಕೆ ಟೆಂಡರ್ ಆಧಾರದಲ್ಲಿ ವಹಿಸಿಕೊಡಲಾಗಿದೆ. ಸದರಿ ರಸ್ತೆಯ ಕಾಮಗಾರಿಯನ್ನು ದಿನಾಂಕ:7.11.2019 ರಂದು ಪ್ರಾರಂಭಿಸಿ ದಿನಾಂಕ: 8.2.2020ಕ್ಕೆ ಕಾಮಗಾರಿ ಮುಕ್ತಾಯಗೊಳಿಸಲಾಗಿದೆ. ಸದರಿ ಗುತ್ತಿಗೆದಾರರಿಗೆ ರೂ. 31.49 ಲಕ್ಷ ಪಾವತಿಸಲಾಗಿದೆ. 2) ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 46.00 ದಿಂದ 49.50, ಕಿ.ಮೀ 52.00 ದಿಂದ 55.00 ಹಾಗೂ ಕಿಮೀ. 59.50 ದಿಂದ 60.50 ರ ವರೆಗೆ ಸುಧಾರಣೆ ಕಾಮಗಾರಿಗೆ ರೂ. 500.00 ಲಕ್ಷ ಮಂಜೂರಾಗಿದ್ದು, ಶ್ರೀ ಎಸ್.ಎಸ್. ಪೋಲಿಸ ಪಾಟೀಲ & ಕಂಪನಿ ಗುತ್ತಿಗೆದಾರರು ಹುಬ್ಬಳ್ಳಿ ಇವರಿಗೆ ರೂ.424.66 ಲಕ್ಷ ಮೊತ್ತಕ್ಕೆ ಟೆಂಡರ್ ಆಧಾರದಲ್ಲಿ ವಹಿಸಿಕೊಡಲಾಗಿದೆ. ದಿನಾಂಕ:6.2.2020 ರಂದು ಕಾಮಗಾರಿಯನ್ನು ಪ್ರಾರಂಭಿಸಿ ಇಲ್ಲಿಯವರೆಗೆ ಕಿ.ಮೀ 52.49 ದಿಂದ 55.465 ರವರೆಗಿನ ಡಾಂಬರೀಕರಣ ಕೆಲಸವನ್ನು ಪೂರ್ಣಗೊಳಿಸಲಾಗಿದೆ. (ಹಳಿಯಾಳದಿಂದ ಕೆಸರೊಳ್ಳಿರವರೆಗಿನ ರಸ್ತೆ ಭಾಗ). ಸದರಿ ಕಾಮಗಾರಿಯ ರೂ.177.88 ಲಕ್ಷ ಮೊತ್ತದ ಬಿಲ್ಲು ಸ್ವೀಕೃತವಾಗಿದ್ದು, ಪಾವತಿಸಲು ಕ್ರಮವಹಿಸಲಾಗುವುದು. 3) ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 55.00 ರಲ್ಲಿ ದುರಸ್ಥಿ ಕಾಮಗಾರಿಯನ್ನು ರೂ.5.00 ಲಕ್ಷ ಮೊತ್ತಕ್ಕೆ ಶ್ರೀ ಬಿ.ಎನ್.ಕಾಮ್ರೇಕರ, ಹಳಿಯಾಳರವರಿಗೆ ವಹಿಸಿಕೊಡಲಾಗಿದೆ. ಕಾಮಗಾರಿಯನ್ನು ದಿನಾಂಕಃ 3.2.2020 ರಂದು ವಹಿಸಿಕೊಡಲಾಗಿದ್ದು ದಿನಾಂಕ 29.2.2020 ರಂದು ಕಾಮಗಾರಿಯನ್ನು ಪೂರ್ಣಗೊಂಡಿದ್ದು, ಬಿಲ್ಲು ಪಾವತಿಸಬೇಕಾಗಿರುತ್ತದೆ.

ಲೋಇ/264/ಐಎಫ್‌ಎ/2020

(ಗೋವಿಂದ ಎಂ ಕಾರಜೋಳ)
ಮಾನ್ಯ ಉಪಮುಖ್ಯಮಂತ್ರಿಗಳು
ಹಾಗೂ ಲೋಕೋಪಯೋಗಿ ಸಚಿವರು